**ಹೆಚ್ಚುವರಿ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ  ನಂ. 446/2014**

| | | | |
|---|---|---|---|
| ಹೆಸರು | : | ಮಕ್ಬುಲ್ ಸಾಬ್ | ಚಾ.ಸಾ.1 |
| ತಂದೆಯ  ಹೆಸರು | : | ಕರೀಮ ಸಾಬ್ | ಪ್ರಾ.ಸಾ.10 |
| ವಯಸ್ಸು | : | 53 ವರ್ಷ | ದಿನಾಂಕಃ 21-02-2024 |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಚಂದನಕೇರಾ | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಆರೋಪಿತರು ನನಗೆ ಗೊತ್ತಿಲ್ಲ. ಚಾಸಾ-2 ರಿಂದ 13 ರವರು ನಮ್ಮ ಊರಿನವರು.

ಈಗ 10 ವರ್ಷಗಳ ಹಿಂದೆ ಸಾಯಂಕಾಲ 6-7 ಗಂಟೆ ಸುಮಾರಿಗೆ ಚಂದನಕೇರಾದಲ್ಲಿ ಮೋಹರಂ ಇದ್ದ ಕಾರಣ ನಾನು ಅಲ್ಲಿ ಪೂಜೆ ಮಾಡಲು ಹೋಗಿದ್ದೆ. ಶಫಿ ಮತ್ತು ಹಮೀದರವರ ಮಧ್ಯ ಗಲಾಟೆಯಾಗಿರುತ್ತದೆ. ನಂತರ ಗ್ರಾಮಸ್ಥರೆಲ್ಲರೂ ಸೇರಿ ಪ್ರಾಸಾ-2 ರವರಿಗೆ ಹೊಡೆದಿರುತ್ತಾರೆ. 8-10 ಜನರು ಸೇರಿ ಪ್ರಾಸಾ-2 ರವರಿಗೆ ಹೊಡೆದಿರುತ್ತಾರೆ. ಅವರು ಹೆಸರು ನನಗೆ ಹೇಳಲು ಬರುವುದಿಲ್ಲ. ಅವರಿಗೆ ನೋಡಿದರೆ ಗುರುತಿಸಲು ಆಗುವುದಿಲ್ಲ. ನಂತರ ಮರುದಿನ ಬೆಳಗ್ಗೆ ಪೋಲಿಸ ಠಾಣೆಗೆ ಹೋಗಿ ದೂರು ನೀಡಿದ್ದೇವೆ. ಈಗ ನೋಡುತ್ತಿರುವ ದೂರನ್ನು ನಾನೇ ನೀಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೆ. ಸದರಿ ದೂರನ್ನು ನಿಪಿ-9 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ಯಾವುದೇ ಸ್ಥಳ ತೋರಿಸಿಲ್ಲ ಮತ್ತು ಪುರಾವಣೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ  ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-**

ದಿನಾಂಕ 27-11-2012 ರಂದು  ಸಾಯಂಕಾಲ 5 ಗಂಟೆ ಸುಮಾರಿಗೆ ನನ್ನ ಮಗನಾದ ಪ್ರಾಸಾ-2 ರವರು ಗೌಡರ ಮನೆಗೆ ಹೋಗಿಬರುತ್ತೇನೆ ಎಂದು  ಹೋಗಿದ್ದು ಸ್ವಲ್ಪ ಸಮಯದಲ್ಲಿ ನನ್ನ ಮಗನಿಗೆ ಯಾರೋ ಪಂಚಾಯತ ಕಾರ್ಯಾಲಯದ ಎದುರಿಗೆ ಸಮಾರು 10 ರಿಂದ 14 ಜನರು ಸೇರಿ ನನ್ನ

ಮಗನಿಗೆ ಹೊಡೆದಿದ್ದಾರೆ ಎಂದು ಜನರು ಅಂದಾಡುವುದರಿಂದ ನನಗೆ ಗೊತ್ತಾಗಿ ನಾನು ಹೋಗಿ ನೋಡುವಷ್ಟರಲ್ಲಿ ಬೆಳಗ್ಗೆ ನನ್ನ ಜೊತೆ ಉದಾನಿ ಸಲುವಾಗಿ ಜಗಳ ಮಾಡಿರುವ ಹಮೀದ, ನಜೀಮ್, ಫತ್ರು ಸಾಬ್ ಹಾಗೂ ಇನ್ನುಳಿದ 11 ಜನರು ಸೇರಿ ನನ್ನ ಮಗನಿಗೆ ಕೆಳಗಡೆ ಹಾಕಿ ಕೈಯಿಂದ ಹೊಡೆಯುತ್ತಿದ್ದಾಗ ಫತ್ರು ಸಾಬ್ ಇತನು ಕಾಲಿನಿಂದ ಹೊಟ್ಟೆಗೆ ಒದೆಯುತ್ತಿದ್ದ ಉಳಿದವರು ಕೈಯಿಂದ ನನ್ನ ಮಗನ ಹೊಟ್ಟೆಗೆ, ಬೇನ್ನಿಗೆ ಹೊಡೆಯುತ್ತಿರುವಾಗ ಒಬ್ಬನು ಕಲ್ಲಿನಿಂದ ನನ್ನ ಎದಗೆ ಹೊಡೆದಿರುತ್ತಾನೆ ಎಂದರೆ ಸರಿ. ಆಗ ನಜೀಮ್ ಈತನು ಚಾಕು ಲೇಕೆ ಆರೇ ಎಂದು ಹೇಳಿದಾಗ ಒಬ್ಬನು ಚಾಕು ತೆಗೆದುಕೊಂಡು ನನಗೆ ಹೊಡೆಯಲು ಬರುತ್ತಿರುವಾಗ ಖಾಸಿಂ, ಇಮಾಮ್ ಸಾಬ್, ರಾಜು, ಬಸವರಾಜ ಸೇರಿ ಬಿಡಿಸುತ್ತಿರುವಾಗ ನಜೀಮ್ ಈತನು ರಂಡಿ ಮಕ್ಕಳಿಗೆ ಹೊಡೆದು ಖಲಾಸ್ ಮಾಡಬೇಕು ಎಂದು ಗುಲಬರ್ಗಾದಿಂದ ನನ್ನ ಗೆಳೆಯರಿಗೆ ಕರೆಕಸಿದ್ದೇನೆ ಹಾಗೇ ಬಿಟ್ಟರೇ ಹೇಗೆ ಎಂದು ಬೈಯುತ್ತಿರುವಾಗ ಅಲ್ಲಿದ್ದವರು ಸಮಜಾಯಿಸಿ ಕಳುಹಿಸಿರುತ್ತಾರೆ ಎಂದರೆ ಸರಿ. ನಾನು ಸದರಿ ಅವರ ಗುಲಬರ್ಗಾದಿಂದ ತಂದ ವಾಹನ ನೋಡಿದಾಗ ಅದು ಕೆಂಪು ಬಣ್ಣದು ಆಗಿತ್ತು ಎಂದರೆ ಸರಿ. ಈ ರೀತಿ ನಾನು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**